**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *03.06.2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಮಧ್ಯಂತರ ಅರ್ಜಿಯ ಮೇಲೆ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಮೈಸೂರಿನಿಂದ ನಂಜಾಪುರ ಗ್ರಾಮವು ಸುಮಾರು 45 ಕಿ.ಮೀಟರ್ ಅಂತರ. ಚಾಸಾ-1 ರವರು 2 ವರ್ಷಗಳಿಂದ ಪರಿಚಯ. ಶವಪಂಚನಾಮೆಗೆ ಬರುವಂತೆ ನನಗೆ ಪೊಲೀಸರು ಯಾವುದೇ ನೊಟೀಸ್ ಕೊಟ್ಟಿರಲಿಲ್ಲ. ಶವ ಪಂಚನಾಮೆ ಯನ್ನು ಸುಮಾರು ಮಧ್ಯಾಹ್ನ 12.00 ರಿಂದ 1.30 ಗಂಟೆಯವರೆಗೆ ಜರುಗಿಸಿದ್ದರು. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಭಾಗವಹಿಸಿಲ್ಲ ಮತ್ತು ಪಂಚನಾಮೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಗೀತಾ ರವರ ಹೇಳಿಕೆಯ ಮೇರೆಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶವ ಪಂಚನಾಮೆಯಲ್ಲಿ ಇರುವ ವಿಷಯಗಳು ನನಗೆ ಗೊತ್ತಿಲ್ಲ. ಶವ ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಶವ ಪಂಚನಾಮೆಯ ವಿವರಗಳು ನನಗೆ ಗೊತ್ತಿಲ್ಲ ಆದರೆ ಸಹಿ ಮಾಡಿದ್ದೇನೆ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*